

ಮಧ್ಯಬಿಂದುವಿನಿಂದ ಏಕಕಾಲಕ್ಕೆ ಹಿಂದಕ್ಕೂ ಮುಂದಕ್ಕೂ ವಿಸ್ತರಿಸಿಕೊಳ್ಳುತ್ತ ಹೋಗುವ ಈ ಕಥನ, ಭಾವುಕವಾದ ಆವರಣವನ್ನು ಸಶಕ್ತವಾಗಿ ನಿರೂಪಿಸುತ್ತದೆ.

■ ಗೌರಿ

# ಭೇಟಿ-ವಿದಾಯಗಳ ನಡುವೆ...

'ನಿಂಗೆ ನೆನಪಿದ್ಯಾ?'

'ಯಾಕೆ? ನೀನು ಮರ್ತಿದೀಯಾ?'

ನಡುವಯಸ್ಸು ಮೀರಿದ ಇಬ್ಬರ ನಡುವೆ ನಡೆಯುವ ಈ ಸಂಭಾಷಣೆಯ ನಡುವಿನ ಅರೆಕ್ಷಣದ ಮೌನದಲ್ಲಿ 'ಇಂಟೀರಿಯರ್ ಕೆಫೆ ನೈಟ್' ಕಿರುಚಿತ್ರದ ಆತ್ಮವಿದೆ. ಆ ಕೇಂದ್ರದ ಸುತ್ತಲೇ, ಅರಳಿದ ಹೂವಿನಿಂದ ಹೊಮ್ಮಿ ಹರಡುವ ಕಂಪಿನ ಅಲೆಯಂತೆಯೇ ಮೃದುಮಧುರವಾಗಿ ಈ ಕಿರುಚಿತ್ರ ರೂಪುಗೊಂಡಿದೆ. ಉತ್ತರ ಅಗತ್ಯವಿಲ್ಲದ ಪ್ರಶ್ನೆಯ ಹಾಗೆಯೇ ಇಡೀ ಕಿರುಚಿತ್ರ ನಮ್ಮೊಳಗೆ ಇಳಿಯುತ್ತದೆ.

ಈ ಕಿರುಚಿತ್ರ ನೋಡಿ ಇನ್ನೊಬ್ಬರಿಗೆ 'ಸಿನಿಮಾದ ಕಥೆ' ಹೇಳುವುದು ಬಲುಕಷ್ಟ. ಯಾಕೆಂದರೆ 'ಹೇಳುವಿಕೆ'ಗೆ ಒಗ್ಗುವಂಥ ಜನಪ್ರಿಯ ಮಾದರಿಯ ಕಥೆ ಇಲ್ಲಿಲ್ಲ. ಆದರೆ ಕೊಳದೊಳಗೆ ಬಿದ್ದ ಕಲ್ಲೊಂದು ದಡದವರೆಗೆ ಅಲೆಯೆಬ್ಬಿಸಿ ತನ್ನೆದೆಯ ಮೇಲೆ ತೇಲುವ ಒಣ ತರಗೆಲೆಗಳಿಗೆ ಸುದ್ದಿ ಮುಟ್ಟಿಸುವ ಹಾಗೆ, ನಮ್ಮೆದೆಯಲ್ಲಿ ಹಲವು ಭಾವಗಳ ಕಂಪನ ಹುಟ್ಟಿಸುವ, ಹಲವು ನೆನಪುಗಳನ್ನು ಉದ್ದೀಪಿಸುವ ಜಾಗೃತ ಆತ್ಮ ಈ ಕಿರುಚಿತ್ರಕ್ಕಿದೆ.

ಹಾಗೆ ನೋಡಲಿಕ್ಕೆ ಹೋದರೆ ಇದು ಹೊಸ ವಿಷಯವನ್ನೇನೂ ಹೇಳಲು ಹೊರಟಿಲ್ಲ. 'ಭೇಟಿ–ವಿದಾಯ' ಎಂಬ ಎರಡೇ ಶಬ್ದಗಳಲ್ಲಿ ಹೇಳಿಬಿಡಬಹುದಾದ ಇಲ್ಲಿನ ಕಥನದ ಕ್ಯಾನ್ವಾಸ್ ಹಳೆಯದೇ. ಆದರೆ ಅದನ್ನು ನಿರೂಪಿಸಿರುವ ರೀತಿಯಲ್ಲಿ ಮತ್ತು ನಾಸಿರುದ್ದೀನ್ ಮತ್ತು ಶೆರ್ನಾಜ್ ಪಟೇಲ್ ಅವರ ಪಕ್ವವಾದ ಅಭಿನಯ ಚಾತುರ್ಯದಲ್ಲಿ ಈ ಸಿನಿಮಾದ ಸತ್ವವಿದೆ; ಮತ್ತೆ ಮತ್ತೆ ನೋಡಿಸಿಕೊಳ್ಳುವ ಶಕ್ತಿಯಿದೆ.

ಅದೊಂದು ಕಾಫಿ ಕೆಫೆ. ಅಂದಿನ ಕೆಲಸ ಮುಗಿಸಿದ ಅಲ್ಲಿನ ಮಾಲೀಕ ತನ್ನ ಕೆಫೆಯಲ್ಲಿ ವಯಸ್ಸಾದ ಹೆಂಗಸೊಬ್ಬಳು ಕಾಫಿ ಕುಡಿಯುತ್ತಿರುವುದನ್ನು ನೋಡುತ್ತಾನೆ. ಥಟ್ಟನೇ ಅವನಿಗೆ ಅವಳ ಗುರ್ತು ಸಿಗುತ್ತದೆ. ಮೂವತ್ತು ವರ್ಷಗಳ ಹಿಂದೆ ಅವನನ್ನು ಬಿಟ್ಟು ಲಂಡನ್‌ಗೆ ಹೋಗಿದ್ದ ಗೆಳತಿ ಅವಳು! ಅದೇ ಸಮಯಕ್ಕೆ ಇನ್ನೊಬ್ಬ ತರುಣ ಮತ್ತೊಂದು ಟೇಬಲ್ ಎದುರು ಕೂತಿದ್ದಾನೆ. ಅಲ್ಲಿ ಅವನ ಗೆಳತಿ ಕೊನೆಯ ವಿದಾಯ ಹೇಳಲುಬಂದಿದ್ದಾಳೆ. ಅವಳು ಈಗ ಲಂಡನ್‌ಗೆ ಹೊರಟಿದ್ದಾಳೆ. ಆ ಎರಡೂ ಜೋಡಿಗಳ ಮಾತುಕತೆಯ ಮೂಲಕವೇ ಕಥೆ ಮಧ್ಯಬಿಂದುವಿನಿಂದ ಹಿಂದಕ್ಕೂ ಮುಂದಕ್ಕೂ ಒಟ್ಟೊಟ್ಟಿಗೇ ಚಲಿಸಲಾರಂಭಿಸುತ್ತದೆ.

ಒಂದು ಮಾತೂ ವ್ಯರ್ಥ ಮಾಡದ ಹಾಗೆ, ನಟರ ಕಣ್ಣ ನೋಟದ ಮೂಲಕವೂ ಹಲವು ಸಂಭಾಷಣೆಗಳನ್ನು ವಿನಿಮಯ ಮಾಡಿಸಿಕೊಂಡು ಕಿರುಚಿತ್ರ ಕಟ್ಟಿದ ರೀತಿ ನಿರ್ದೇಶಕರಿಗೆ ಈ ಮಾಧ್ಯಮದ ಮೇಲೆ ಇರುವ ಹಿಡಿತವನ್ನು ಸೂಚಿಸುವ ಹಾಗಿದೆ. ಅದರಲ್ಲಿಯೂ ನಾಸಿರುದ್ದೀನ್ ಶಾ ಅವರಂತೂ ಬಾಯಿಯಿಂದ ಮಾತಾಡುವುದಕ್ಕಿಂತ ಕಣ್ಣುಗಳ ಮೂಲಕ ಮಾತಾಡುವುದೇ ಹೆಚ್ಚು!

ಹದಿಮೂರು ನಿಮಿಷಗಳ ಈ ಕಿರುಚಿತ್ರದಲ್ಲಿ ನಿರ್ದೇಶಕರು ಸಬ್‌ಟೆಕ್ಸ್ಟ್‌ಗಳನ್ನು ದುಡಿಸಿಕೊಂಡಿರುವ ರೀತಿಯೂ ಕುತೂಹಲಕಾರಿ ಆಗಿದೆ. ಮೊದಲ ದೃಶ್ಯದಲ್ಲಿ ಕೆಲಸ ಮುಗಿಸಿ ಬಂದ ಕೆಫೆ ಮಾಲಿಕ ರೆಡಿಯೋದಲ್ಲಿ ಬರುತ್ತಿರುವ ಹಾಡು ಬದಲಾಯಿಸುವುದಕ್ಕೂ, ಅವನಿಗೆ ಎದುರಿನ ಟೇಬಲ್ ಮೇಲೆ ಕೂತಿರುವ ತನ್ನ ಹಳೆಯ ಗೆಳತಿ ಕಾಣುವುದಕ್ಕೂ ಸರಿಹೋಗುತ್ತದೆ. ಅವನ ಬದುಕಿನ ಹಳೆಯ ನೆನಪುಗಳು ತೆರೆದುಕೊಳ್ಳುತ್ತಿರುವಾಗ ಹಿನ್ನೆಲೆಯಲ್ಲಿ ಗಡಿಯಾರದ ಮುಳ್ಳುಗಳು ಚಲಿಸುವ ಸದ್ದು ಮೆಲುವಾಗಿ ಕೇಳಿಸುತ್ತಿರುತ್ತದೆ. ಇಂಥ ಹಲವು ಸೂಕ್ಷ್ಮ ವಿವರಗಳು ಇಡೀ ಸಿನಿಮಾಗೆ ತುಂಬ ಸಹಜವಾದ ಮತ್ತು ಜೀವಂತವಾದ ಒಂದು ಆವರಣವನ್ನು ರೂಪಿಸಿವೆ.

ಚೌಕಟ್ಟಿನೊಳಗಿನ ಸಿದ್ಧ ಮಾದರಿಯ ಕಥೆ ಹೇಳುವ ಜಾಡು ಬಿಟ್ಟು ಒಂದು ಭಾವುಕ ಆವರಣ ಕಟ್ಟುವ ನಿರ್ದೇಶಕರ ಪ್ರಯತ್ನ ಕ್ಲೈಮ್ಯಾಕ್ಸ್‌ನಲ್ಲಿ ತೆಳುವಾಗಿಬಿಡುವುದು ವಿಪರ್ಯಾಸ. ಭಿನ್ನ ಕೋನಗಳಿಂದ ಭೇಟಿ ಮತ್ತು ವಿದಾಯಗಳ ಭಾವುಕ ಜಗತ್ತಿನ ಒಳಗೆ ನಮ್ಮನ್ನು ಇಳಿಸುತ್ತ ಹೋಗುವ ಅವರು ಕೊನೆಯಲ್ಲಿ ಸರ್ರನೇ ಆ ಆವರಣದಿಂದ ಎತ್ತಿ ಹಗುರಗೊಳಿಸಿಬಿಡುತ್ತಾರೆ. ಶುಭಾಂತ್ಯದ ಹಂಗಿಗೆ ಬಿದ್ದಿರುವುದೇ ಈ ಕಿರುಚಿತ್ರ ದೌರ್ಬಲ್ಯವಾಗಿಬಿಟ್ಟಿದೆ. ಆದರೆ ಈ ದೌರ್ಬಲ್ಯ, ಕಿರುಚಿತ್ರ ನೋಡುವ ಖುಷಿಗೆ ತಡೆಯಾಗುವುದಿಲ್ಲ.



**ಹೆಸರು:** ಇಂಟೀರಿಯರ್ ಕೆಫೆ ನೈಟ್ (ಹಿಂದಿ)
**ನಿರ್ಮಾಣ, ನಿರ್ದೇಶನ:** ಅಧಿರಾಜ್ ಬೋಸ್
**ಛಾಯಾಗ್ರಹಣ:** ಸಂತನಾ ಕೃಷ್ಣನ್ ರವಿಚಂದ್ರನ್
**ಸಂಕಲನ:** ಪ್ರವೀಣ್ ಜಹಾಗಿದಾರ್
**ಸಂಗೀತ:** ಕರಣ್ ಮಲ್ಹೋತ್ರ
**ಧ್ವನಿ:** ಶಿಶಿರ ಚಾಸಾಲ್ಕರ್
**ತಾರಾಗಣ:** ನಾಸಿರುದ್ದೀನ್ ಶಾ, ಶೆರ್ನಾಜ್ ಪಟೇಲ್, ನವೀನ್ ಕಸ್ತುರಿಯಾ, ಶ್ವೇತಾಬಸು ಪ್ರಸಾದ್

ಈ ಕಿರುಚಿತ್ರ ವೀಕ್ಷಣೆಗೆ
bit.ly/2kBTqnB
ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.